

ಬಹುತೇಕ ಕಲಾತ್ಮಕ ಸಿನಿಮಾಗಳಂತೆ ಹನೆಕೆಯ ಸಿನಿಮಾಗಳೂ ಸಾಗಿದರೂ ಆತನ ಧಾಟಿ ಎಲ್ಲರಿಗಿಂತಲೂ ಭಿನ್ನವಾದುದು. ಈತನ ಚಲನಚಿತ್ರಗಳು ವರ್ತಮಾನದ ತೊಡಕುಗಳನ್ನು ತೊಡಕುಗಳಾಗಿಯೇ ಪರದೆಯಲ್ಲಿ ಬಿಟ್ಟುಬಿಡುತ್ತವೆ, ಯಾವುದೇ ಉತ್ತರಗಳನ್ನೊ ಅಂತ್ಯಗಳನ್ನೊ ಕೊಡಲು ಹೋಗುವುದಿಲ್ಲ. ಆ ಮುಖೇನ ನೋಡುಗರನ್ನು ಕ್ರಿಯಾಶೀಲಗೊಳಿಸಿ ಹೊಸ ಸಿನಿಮಾದ ಮುನ್ನುಡಿ ಬರೆಯುತ್ತದೆ. ಸಿನಿಮಾ ಎಂಬುದು ಈತನಲ್ಲಿ ಕೇವಲ ಸಿನಿಮಾವಾಗದೆ ಅದೊಂದು ನೋಡುಗರ ಜೊತೆಗಿನ ಚರ್ಚೆ, ಸಂವಾದವಾಗುತ್ತದೆ. ಹನೆಕೆಯ ಸಿನಿಮಾಗಳಲ್ಲಿನ ಚಿಮ್ಮುವ ರಕ್ತ, ಕೊಲ್ಲಲ್ಪಡುವ ಪ್ರಾಣಿಗಳು, ಹಸಿಹಸಿ, ದೀರ್ಘ ದೃಶ್ಯಗಳು ಕೆಲವರನ್ನು ಬೆಚ್ಚಿಬೀಳಿಸುತ್ತವೆ; ಸಿನಿಮಾ – ಸಾಹಿತ್ಯಗಳಲ್ಲಿ ನೀತಿ ಪಾಠ, ನೈತಿಕತೆಗಳ ಹುಡುಕುವ 'ನೀತಿವ್ಯಾಧಿ'ಗಳು ಈತನ ಸಿನಿಮಾಗಳನ್ನು ನೋಡಲಾಗದೆ ಎದ್ದು ಹೋದದ್ದೂ ಇದೆ; ಕೆಲವರನ್ನು ತೀವ್ರ ಚಿಂತನೆಗೆ ಹಚ್ಚಿದ ಉದಾಹರಣೆಗಳೂ ಇವೆ. ಈತನ ಸಿನಿಮಾಗಳಲ್ಲಿ ಗಾಢವಾಗಿರುವ ಹಿಂಸೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ ಬೇರೆಯದೇ ಆದ ಸಿದ್ಧತೆ ಬೇಕು.

ಆಸ್ಕರ್ ಒಳಗೊಂಡಂತೆ ವಿಶ್ವದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿರುವ ಹನೆಕೆಯ ಸಿನಿಮಾಗಳು ಅಸಾಧ್ಯ ಮೌನ ಮತ್ತು ದೀರ್ಘ ದೃಶ್ಯಗಳನ್ನು ಹೊಂದಿರುವಂತಹವು. ವಿವಿಧ ನೋಡುಗರ ವಿವಿಧ ನೋಟಗಳಿಗೆ ಅವಕಾಶ ನೀಡುವ ಈತನ ಚಲನಚಿತ್ರಗಳು ಹಲವು ಅರ್ಥಸಾಧ್ಯತೆಗಳನ್ನು ಹೊಂದಿರುವ ರಕ್ತಕಾವ್ಯ! ರಕ್ತಹಿಂಸೆಗಳ ಆಳಕ್ಕಿಳಿದು ಮನಸ್ಸಿನ ಮೇಲ್ಪದರನ್ನು ಅಲುಗಾಡಿಸುವ ಹನೆಕೆ ನಿನ್ನೆ ನಾಳೆಗಳ ರಕ್ತನಾಳಗಳನ್ನು ಒಡೆದುಹಾಕುತ್ತಾನೆ. ಹಾಗೆ ಒಡೆದುಹಾಕಿದ ಒಂದು ಕಾವ್ಯವೇ ಕೆಚೆ (Caché). 2005ರ ಕೇನ್ಸ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಈ ಚಿತ್ರ